ಅನುಚ್ಛೇಧ 275(ರಡಿ) ಹಾಗೂ ಗಿರಿಜನ ಉಪಯೋಜನೆ ಯಡಿ ಕ್ರೋಡೀಕರಿಸಿದ ಅನುದಾನ ಇವುಗಳ ಅಡಿ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ತಾಲ್ಲೂಕು	ಭಾರತ ಸಂವಿಧಾನ ಅನುಚ್ಛೇಧ 275(1)	ಕ್ರೋಡೀಕರಿಸಿದ ಅನುದಾನ	ಒಟ್ಟು
1	ಹೊಸದುರ್ಗ	20.00	7.50	27.50
2	ಮೊಳಕಾಲ್ಮೂರು	30.00	18.00	48.00
3	ಹೊಳಲ್ಕೆರೆ	22.00	10.00	32.00
4	ಹಿರಿಯೂರು	75.00	11.00	86.00
5	ಚಿತ್ರದುರ್ಗ	15.00	25.00	40.00
6	ಚಳ್ಳಕೆರೆ	32.00	46.00	78.00
	ಒಟ್ಟು	**194.00**	**117.50**	**311.50**

ಆ) ಇಲ್ಲ.

ಇ) ಈಗ ಅಂತಹ ಯಾವುದೇ ತಾರತಮ್ಯ ಮಾಡಿರುವುದಿಲ್ಲ.

ಈ) ಮಂಜೂರು ಮಾಡಲಾಗಿದೆ.

ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿ ಕೊರತೆ

945 (814) ಶ್ರೀ ತುಕಾರಾಮ್ ಇ. (ಸಂಡೂರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ಪಟ್ಟಣದಲ್ಲಿರುವ 100 ಹಾಸಿಗೆಗಳ ಆಸ್ಪತ್ರೆಯಲ್ಲಿ ಮತ್ತು ತಾಲ್ಲೂಕಿನ ಹಲವಾರು ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಮತ್ತು ಇತರೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಇದುವರೆವಿಗೂ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರಗಳನ್ನು ಒದಗಿಸುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಅನುಬಂಧ – 1

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡಿರುವ/ತೆಗೆದುಕೊಳ್ಳಲಿರುವ ಕ್ರಮಗಳ ವಿವರ

2. ತಜ್ಞ ವೈದ್ಯರ ಖಾಲಿ ಹುದ್ದೆಗಳನ್ನು 2010 ರಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಗೆ ಸ್ಥಳನಿಯುಕ್ತಿ ಮಾಡುವ ಮೂಲಕ ಆದ್ಯತಾನುಸಾರ ಭರ್ತಿ ಮಾಡಲು ಕ್ರಮವಹಿಸಲಾಗುವುದು.

8. (1) ಮಕ್ಕಳ ತಜ್ಞರು, (2) ಅರವಳಿಕೆ ತಜ್ಞರು ಹಾಗೂ (3) ಸ್ತ್ರೀರೋಗ ತಜ್ಞರುಗಳ ಕೊರತೆಯನ್ನು ನೀಗಿಸಲು ಮಾಸಿಕ ಗರಿಷ್ಠ ರೂ. 50,000 ರವರೆಗೆ ಗೌರವಧನ ನೀಡಿ ನೇಮಕ ಮಾಡಿಕೊಳ್ಳಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ (ಎನ್.ಆರ್. ಹೆಚ್.ಎಂ.) ಅಡಿ ಅವಕಾಶ ಕಲ್ಪಿಸಲಾಗಿದೆ. ಹಾಗೂ ಇದೇ ಯೋಜನೆಯಡಿ ಪ್ರಕರಣವಾರು ಆಧಾರದ ಮೇಲೆ ಪ್ರತೀ ಪ್ರಕರಣವೊಂದಕ್ಕೆ (1) ಮಕ್ಕಳ ತಜ್ಞರಿಗೆ ರೂ.500, (2) ಅರೆವಳಿಕೆ ತಜ್ಞರಿಗೆ ರೂ. 1,000 ಹಾಗೂ (3) ಸ್ತ್ರೀರೋಗ ತಜ್ಞರಿಗೆ ರೂ. 1,500 ರಂತೆ ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ.

9. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣಾ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ) ರ ಅಡಿಯಲ್ಲಿ ಮೇಲಿನ ಕ್ರಮ ಸಂಖ್ಯೆ: 2 ರಲ್ಲಿ ತಿಳಿಸಿರುವ 3 ತಜ್ಞತೆಗಳನ್ನು ಹೊರತುಪಡಿಸಿ ಉಳಿದ ತಜ್ಞತೆಯಲ್ಲಿ ಮಾಸಿಕ ರೂ. 5,000 ಗೌರವಧನ ನೀಡಿ ರಿಟೈನರ್‌ಶಿಪ್ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ, ಇದೇ ಕೆ.ಹೆಚ್.ಎಸ್.ಆರ್.ಡಿ.ಪಿ. ಯೋಜನೆಯಡಿ,

ಸದರಿ ತಜ್ಞರು ಹೊರರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ. 1,000 ದಂತೆ ಗೌರವಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೆ ವಾರಕ್ಕೆ ಎರಡು ದಿನಕ್ಕೆ ಮಾತ್ರ ಅಂತಹ ಸೇವೆಯನ್ನು ಪಡೆಯಲು ಮಿತಿಗೊಳಿಸಲಾಗಿದೆ.

10. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.
11. ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ 5021 ಅರೆವೈದ್ಯಕೀಯ ಹುದ್ದೆಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಅದು ಪೂರ್ಣಗೊಂಡ ನಂತರ ಆದ್ಯತಾನುಸಾರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.
12. ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 562 ವೈದ್ಯರ ಹಾಗೂ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿದೆ.
13. ಪ್ರಸ್ತುತ ಗ್ರೂಪ್–ಡಿ ನೌಕರರ ವೃಂದದಲ್ಲಿ ನೇಮಕಾತಿ ಮಾಡಲು ನಿಷೇಧವಿದ್ದು, ಅವಶ್ಯವಿರುವೆಡೆ ಬಾಹ್ಯ ಮೂಲಗಳಿಂದ ಸೇವೆ ಪಡೆದು ನಿರ್ವಹಿಸಲು ಕ್ರಮವಹಿಸಲಾಗಿದೆ.

ಅಂಗನವಾಡಿ ಕೇಂದ್ರಗಳ ಮಾಹಿತಿ

946 (154) ಶ್ರೀ ವಸಂತ ಬಂಗೇರ. ಕೆ (ಬೆಳ್ತಂಗಡಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಅಂಗನವಡಿ ಕೇಂದ್ರಗಳು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿವೆ (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಅಂಗನವಾಡಿ ಕಟ್ಟಡಗಳಿಗೆ ಇಲಾಖೆ ಬಾಡಿಗೆ ನೀಡುತ್ತದೆಯೇ; ಹೌದಾದಲ್ಲಿ, ಕಳೆದ 2 ವರ್ಷಗಳಲ್ಲಿ ಒಟ್ಟು ಎಷ್ಟು ಮೊತ್ತವನ್ನು ಬಾಡಿಗೆ ರೂಪದಲ್ಲಿ ಪಾವತಿಸಲಾಗಿದೆ;

ಇ) ಬಾಡಿಗೆ ಕಟ್ಟಡಗಳಲ್ಲಿರುವ ಅಂಗನವಾಡಿಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;